ಯುವ ಜಾಗೃತಿ

# ಇತಿಹಾಸದ ಪುಟಗಳಿಂದ...

'ಜ್ಯೋತಿಷ್ಮತಿ'

ಪ್ರಾಚೀನ ಭಾರತದ ಇತಿಹಾಸವನ್ನು ಓದುವಾಗ ನಾವು ಅನೇಕ ರೋಚಕವಾದ ಸಂಗತಿಗಳನ್ನು ಗಮನಿಸುತ್ತೇವೆ. ಅತಿ ಪುರಾತನವೆಂದು ಪರಿಗಣಿಸಲಾಗಿರುವ ವೈದಿಕ ಕಾಲಘಟ್ಟ, ಅದೇ ರೀತಿ ಸಿಂಧೂನದೀ ನಾಗರಿಕತೆ, ರಾಮಾಯಣ–ಮಹಾಭಾರತ ಕಾವ್ಯಗಳು ಕಟ್ಟಿಕೊಡುವ ಐತಿಹಾಸಿಕ ರಾಜವಂಶಗಳು, ಮುಂದೆ ಮೌರ್ಯ–ಗುಪ್ತರ ಯುಗ, ಉತ್ತರ–ದಕ್ಷಿಣ ರಾಜವಂಶಗಳ ಆಳ್ವಿಕೆ, ಮೊಗಲರ ಹಾಗೂ ಬ್ರಿಟಿಷರ ಆಗಮನ ಮತ್ತು ಧಾರ್ಮಿಕ ಹಾಗೂ ಸಾಮಾಜಿಕ ಅರಾಜಕತೆ — ಈ ರೀತಿಯಾಗಿ ಗುರುತಿಸಲಾಗುವ ವಿವಿಧ ಕಾಲಘಟ್ಟಗಳಲ್ಲಿ ವಿಶೇಷವಾಗಿ ಗಮನಕ್ಕೆ ಬಾರದೆ ಹೋದ ಘಟನೆಗಳೆಷ್ಟೋ! ಇತಿಹಾಸ ಗರ್ಭದಲ್ಲಿ ಮರೆಯಾದ ವ್ಯಕ್ತಿಗಳೆಷ್ಟೋ! ಆದರೆ ಇತಿಹಾಸವೆಂದರೆ ಕೇವಲ ರಾಜರುಗಳ ಕಥೆ ಎಂದಷ್ಟೇ ಭಾವಿಸದೆ, ಆ ಕಾಲದ ಸಾಮಾಜಿಕ - ಸಾಂಸ್ಕೃತಿಕ ಬದುಕಿನ ಕಡೆಗೂ ಗಮನ ಹರಿಸುವ ಓದುಗನಿಗೆ ಭಾರತದ ಚರಿತ್ರೆಯುದ್ದಕ್ಕೂ ಹತ್ತು ಹಲವು ಅಸಾಧಾರಣ ಸಂಗತಿಗಳು ಕಂಡುಬರುತ್ತವೆ. ಅವನು ರಾಜ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ಹಳ್ಳಿಯ ರೈತರನ್ನು ಕಾಣುತ್ತಾನೆ; ಮಾನಕ್ಕಾಗಿ ಚಿತೆಯೇರಿದ ರಾಜಕುಮಾರಿಯ ಕಥೆಯನ್ನು ಗಮನಿಸುತ್ತಾನೆ; ಗುರುಗಳ ಪ್ರೇರಣೆಯಂತೆ ಇಡೀ ರಾಜ್ಯದ ಆಧಿಪತ್ಯವನ್ನು ವಹಿಸಿಕೊಂಡ ಕುರಿಗಾಹಿಯನ್ನು ನೋಡಿ ಅಚ್ಚರಿಪಡುತ್ತಾನೆ. ಎಲ್ಲಕ್ಕಿಂತ ಹೆಚ್ಚಾಗಿ, ಜನಜೀವನದ ಉದ್ದಕ್ಕೂ ಪ್ರಭಾವ ಬೀರುವ ಸಾಧುಸಂತರ ನೀರವ, ಶಾಂತ ಬದುಕನ್ನು ನೋಡಿ ತಲೆದೂಗುತ್ತಾನೆ.




### ಏಕೆ ಇತಿಹಾಸ?

ಇತ್ತೀಚೆಗೆ ವಿದ್ಯಾಭ್ಯಾಸದ ಗುರಿ, ಬೋಧನೆಯ ಕ್ರಮ, ಅದರ ಪರಿಣಾಮ ಎಲ್ಲವೂ ಬದಲಾಗಿದೆ. ಅರಿವನ್ನು ಹೊಂದಿ ಒಬ್ಬ ಪ್ರಬುದ್ಧ ವ್ಯಕ್ತಿಯಾಗಬೇಕು ಎಂದು ಯಾರೂ ಶಿಕ್ಷಣ ಪಡೆಯುವುದಿಲ್ಲ. ಡಾಕ್ಟರ್, ಇಂಜಿನಿಯರ್, ವಿದೇಶಿ ಹುದ್ದೆ, ಸರ್ಕಾರಿ ಪದವಿ ಇತ್ಯಾದಿಗಳಿಗೋಸ್ಕರ ಉನ್ನತ ಶಿಕ್ಷಣ ಪಡೆಯುತ್ತಾರೆ. ಆರ್ಥಿಕ, ಔದ್ಯೋಗಿಕ ಕಾರಣಕ್ಕಾಗಿಯೇ ಪ್ರಾಥಮಿಕ ವಿದ್ಯಾಭ್ಯಾಸದ ಹಂತದಿಂದಲೂ ತಯಾರಿ ನಡೆಯುತ್ತದೆ. ಈ ಸನ್ನಿವೇಶದಲ್ಲಿ ಇತಿಹಾಸದಂತಹ ವಿಷಯಗಳ ಬಗೆಗಂತೂ ಎಲ್ಲಿಲ್ಲದ ಅಸಡ್ಡೆ, 'ನಿರುಪಯುಕ್ತ ಸಬ್ಜೆಕ್ಟ್ ಇದು' ಎಂಬ ಗೋಗರೆಯುವಿಕೆ ಸರ್ವೇಸಾಮಾನ್ಯ. ಹೀಗಿರುವಾಗ ನಮ್ಮ ದೇಶದ ಹಿರಿಮೆ, ಸಂಸ್ಕೃತಿ, ಸಮೃದ್ಧ ಜನಜೀವನ ಇವುಗಳನ್ನು ಅರಿತು ಅವುಗಳ ಬಗ್ಗೆ ಹೆಮ್ಮೆ ತಾಳುವುದು ಹೇಗೆ? ಬೇರೆ ದೇಶಗಳಿಗೆ ಉದ್ಯೋಗಕ್ಕಾಗಿ ಹೋಗುತ್ತಾರೆ. ಅಲ್ಲಿನ ಜನರ ಜೀವನ, ಸಂಸ್ಕೃತಿ, ಇತಿಹಾಸಗಳ ಬಗ್ಗೆ ಅಲ್ಲಿನವರು ಹೆಮ್ಮೆಯಿಂದ ಬೀಗಿ ಹೇಳಿಕೊಳ್ಳುವಾಗ, ನಮ್ಮ ದೇಶದ ಬಗ್ಗೆ ಏನೂ ಗೊತ್ತಿಲ್ಲದ ಇವರು 'ಅಬ್ಬಾ ಏನು ದೇಶವಿದು!' ಎಂದು ಅಲ್ಲಿನವರ ಬಗ್ಗೆ ಆಶ್ಚರ್ಯಪಡುತ್ತಾರೆ. ನಮ್ಮ ದೇಶದ ಹಿನ್ನೆಲೆ, ಇತಿಹಾಸ, ಸಂಸ್ಕೃತಿಗಳ ಬಗ್ಗೆ ಏನೂ ಗೊತ್ತಿಲ್ಲದೆ, ಇತರ ದೇಶಗಳ ಬಗ್ಗೆ ಅಪಾರ ತಿಳಿವಳಿಕೆ ಹೊಂದಿ, ಅಲ್ಲೇ ನೆಲೆಸುವ ಮಂದಿ ಯಾವ ರೀತಿಯಲ್ಲಿ ಭಾರತೀಯರಾಗುತ್ತಾರೆ? ಪ್ರಪಂಚದ ಮುಂದೆ ಭಾರತದ ಬಗ್ಗೆ ಕೀಳು ಭಾವನೆ ಉಂಟಾಗಲು ಇಂತಹ ಭಾರತೀಯರ ಅಜ್ಞಾನ, ಕೀಳರಿಮೆ, ದಾಸ್ಯಮನೋಭಾವಗಳೇ ಕಾರಣ. ಸ್ವಾಮೀಜಿ ಹೇಳುವಂತೆ, ಮಲಗಿದ್ದ ಸಿಂಹ ಎಚ್ಚರಗೊಳ್ಳಬೇಕು. ನಮ್ಮ ದೇಶದ ಬಗ್ಗೆ ನಾವು ಹೆಚ್ಚು ತಿಳಿದುಕೊಳ್ಳಬೇಕು. ಅಭಿಮಾನ, ಉತ್ಸಾಹ, ಅರಿವು, ಶಕ್ತಿಗಳಿಂದ ನಾವು ಪುಟಿದೇಳಬೇಕು. ಇದಕ್ಕೆ ಅತ್ಯುತ್ತಮ ಆಯುಧವೇ ನಮ್ಮ ಸರಿಯಾದ ಇತಿಹಾಸವನ್ನು ತಿಳಿದುಕೊಳ್ಳುವುದು. 'ಸರಿಯಾದ' — ಇದು ಮುಖ್ಯ. ತಮ್ಮ ತಮ್ಮ ಹಿತಾಸಕ್ತಿಗಳಿಗೆ ತಕ್ಕಂತೆ ಬ್ರಿಟಿಷರು, ರಾಜಕೀಯ ಪಕ್ಷಗಳು ಬರೆದ, ಬರೆಸಿದ ಇತಿಹಾಸವಲ್ಲ. ಇದಕ್ಕೆ ನಮ್ಮ ಯುವಕರು ಮುಂದಾಗಬೇಕು. ಚಾರಿತ್ರಿಕ ಸಂಶೋಧನೆ ಮತ್ತೊಮ್ಮೆ ನಮ್ಮ ದೇಶದಲ್ಲಿ ಮುನ್ನೆಲೆಗೆ ಬರಬೇಕು.

ಈ ಸರಣಿಯಲ್ಲಿ ಇತಿಹಾಸದ ಪುಟಗಳಲ್ಲಿ ಸದ್ದಿಲ್ಲದೆ ಅಡಗಿಹೋದ, ಆದರೆ ಅತ್ಯಂತ ಮಹತ್ವದ ಘಟನೆಗಳನ್ನು, ವ್ಯಕ್ತಿಗಳನ್ನು ಮತ್ತೆ ಕಾಣುವ ಪ್ರಯತ್ನ ಮಾಡೋಣ.